# ವಾಸ್ತವ ಲೋಕದ ಕನ್ನಡಿ

## 'ಬೆಟ್ಟದ ಜೀವ'ದ ಗೋಪಾಲಯ್ಯ



**ಮಂಜುಳಾ ಜಿ.ಎಚ್.**

ಕಲೆ: ಅಕ್ಷಯ ಹೆಗಡೆ ಜಾಲಿಮನೆ

ನನ್ನ ದೃಷ್ಟಿ ನನ್ನದು ಎನ್ನುವಲ್ಲಿ, 'ನನ್ನದೇ ದೃಷ್ಟಿಯಾ' ಎಂಬುದು ನನ್ನಲ್ಲಿಯೇ ಹುಟ್ಟಬಹುದಾದ ಪ್ರಶ್ನೆಯೂ ಆಗಿದೆ. ಜ್ಞಾನ, ಅನುಭವ ಮತ್ತು ವೃತ್ತಿಯ ಕಾರಣದಿಂದ ನಾವು ಎಲ್ಲಿಯೇ ಹುಟ್ಟಿ ಎಲ್ಲಿಯೊ ಬೆಳೆದು ಇನ್ನೆಲ್ಲಿಯೋ ಜೀವಿಸುತ್ತಿದ್ದೇವೆ. ಆದರೆ, ನಮ್ಮದೇ ನೆಲಮೂಲದ ನೆಮ್ಮದಿ ಎಲ್ಲಿ ಹುಡುಕಿದರೂ ಸಿಗುವುದಿಲ್ಲ. ಈ ಹಿನ್ನೆಲೆಯಲ್ಲಿ ಯೋಚಿಸಿದಾಗ, ವ್ಯಕ್ತಿಗೆ ತಂದೆ ಮಾತ್ರ 'ತಂದೆ'ಯ ಪ್ರೀತಿಯನ್ನು ಕೊಡಬಲ್ಲ ಎನ್ನುವುದನ್ನು 'ಬೆಟ್ಟದ ಜೀವ' ಕಾದಂಬರಿಯ ಗೋಪಾಲಯ್ಯನ ಪಾತ್ರ ನಿರೂಪಿಸಿದೆ. ಈ ಆಲೋಚನೆಯು ಕಾದಂಬರಿಯಲ್ಲಿ ಬರುವ ಶಿವರಾಮನಿಗೆ ಅರ್ಥವಾಗುವ ಪರಿ, ಓದುಗರಿಗೂ ಅರ್ಥವಾಗುವ ನೆಲೆಯಿಂದ 'ಬೆಟ್ಟದ ಜೀವ' ಕಾದಂಬರಿ ಇಂದಿಗೂ ಜೀವಂತವಾಗಿದೆ.

ಪ್ರಪಂಚವನ್ನು ಮಾನವ ಕೇಂದ್ರಿತವಾಗಿ ನೋಡುವ ದೃಷ್ಟಿಕೋನವೊಂದು ಶಿವರಾಮ ಕಾರಂತರ ಕಾಲಕ್ಕೆ ಬೆಳೆಯಲಾರಂಭಿಸಿತ್ತು. ಎಲ್ಲ ಮನುಷ್ಯ ವ್ಯಾಪಾರಗಳನ್ನು ಬುದ್ಧಿಯ-ತರ್ಕದ, ಇಂದ್ರಿಯ ಗ್ರಾಹ್ಯ ತಿಳಿವಳಿಕೆಯ ತೆಕ್ಕೆಯೊಳಗೆ ತೆಗೆದುಕೊಳ್ಳಲು ಸಾಧ್ಯ ಎಂಬ ಆತ್ಮವಿಶ್ವಾಸ ಮೂಡಿಸಿದ ಶಿವರಾಮ ಕಾರಂತರು ತಮ್ಮ ಜೀವಿತಾವಧಿಯಲ್ಲಿ ಬರೆದದ್ದು ಸುಮಾರು 427 ಕೃತಿಗಳು. ನಮಗೆ ಆಶ್ಚರ್ಯವಾಗಬಹುದು... ಇದರ ಜೊತೆಗೆ ಅವರು ತಮ್ಮ 96ನೇ ವಯಸ್ಸಿನಲ್ಲಿಯೂ ಹಕ್ಕಿಗೆ ಸಂಬಂಧಿಸಿದ ಪುಸ್ತಕವೊಂದನ್ನು ಬರೆದಿದ್ದರು. ಈ ಜಗತ್ತಿನ ಕುರಿತು ಅವರಿಗೆ ಇದ್ದ ಕುತೂಹಲ, ವಿಸ್ಮಯ ಅಮಿತವಾದುದು.

ಸಾಹಿತ್ಯಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಕ್ಷೇತ್ರದಲ್ಲಿಯೂ ತಮ್ಮದೇ ಆದ ಛಾಪನ್ನೂ ಮೂಡಿಸಿದ ಮೇರು ವ್ಯಕ್ತಿತ್ವ 'ಕಡಲತೀರ ಭಾರ್ಗವ'ಕಾರಂತರದ್ದು. ಇವರ ಬರಹದ ವೈಶಿಷ್ಟ್ಯವೇ ಅಂಥದ್ದು. ಹೇಳಬೇಕಾದ ವಿಷಯವನ್ನು ತುಂಬಾ ಸರಳವಾಗಿ ಮುಟ್ಟಿಸುವುದು ಅವರಿಗೆ ಒಲಿದ ಕಲೆ. ಕಾರಂತರ ಕುರಿತು ವಿಮರ್ಶಕ ಕೀರ್ತಿನಾಥ ಕುರ್ತಕೋಟಿಯವರು ಹೇಳಿದ ಮಾತೊಂದು ನೆನಪಾಗುತ್ತಿದೆ: 'ತಟಸ್ಥ ಚಿತ್ತದಿಂದ ಜೀವನಾನುಭವವನ್ನು ಅಳೆದು, ತೂಗಿ ಬೆಲೆಗಟ್ಟುವ ಒಂದು ವಿಧಾನ ಕಾರಂತರ ಕಾದಂಬರಿಗಳಲ್ಲಿ ಕಂಡು ಬರುತ್ತದೆ.' ಅವರ ಕಾದಂಬರಿಗಳನ್ನು ಓದುತ್ತ ಹೋದಂತೆ, ನನಗೂ ಈ ಮಾತು ಎಷ್ಟೋ ಬಾರಿ ನೆನಪಾಗಿ ನಿಜವೆನಿಸುತ್ತದೆ. ಅದರಲ್ಲಿಯೂ 'ಬೆಟ್ಟದ ಜೀವ' ಕಾದಂಬರಿ ಮತ್ತಷ್ಟು ಕಾಡುವಂಥದ್ದು.

ಕಾಲ, ದೇಶ, ಯಾವುದಾದರೂ ಭಾವನೆಗಳು, ಮನುಷ್ಯ ಸಂಬಂಧಗಳು ಯಾವತ್ತಿಗೂ ಏಕರೂಪಿಯಾಗಿರಬೇಕು. 'ಚೋಮನ ದುಡಿ'ಯ ಚೋಮ, 'ಅಳಿದ ಮೇಲೆ' ಕೃತಿಯ ಯಶವಂತರಾಯ, 'ಮರಳಿಮಣ್ಣಿಗೆ'ಯ ರಾಮು, ಒಂದೇ..ಎರಡೇ..ಎಲ್ಲಾ ಕಾದಂಬರಿಯಲ್ಲಿಯೂ ಹೀಗೆ ಕಾಡುವ, ಕಾಪಿಡುವ